**ದಿನಾಂಕಃ 27.04.2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮಧ್ಯಂತರ ಅರ್ಜಿ 7 ಮತು 8 ಆದೇಶದ ಮೇರೆಗೆ ಪಾಟೀಸವಾಲು ಅನುಮತಿ ನೀಡಲಾಯಿತು.**

**ಪಾಟೀಸವಾಲುಃ ಶ್ರೀ DKG ವಕೀಲರಿಂದಃ ವಾದಿ ಪರಃ**

ನಾನು ಸಾಕ್ಷಿಯನ್ನು ನನ್ನ ಮತ್ತು ನನ್ನ ತಾಯಿಯ ಪರವಾಗಿ ಹೇಳುತ್ತಿದ್ದೇನೆ. ನನ್ನ ತಾಯಿಯ ಪರವಾಗಿ ನಾನು ಅಧಿಕಾರ ಪತ್ರ ಪಡೆದಿರುವುದಿಲ್ಲ ವಾದಿ ಏನು ದಾವೆ ಸಲ್ಲಿಸಿದ್ದಾರೆ ಮತ್ತು ಅವರು ಸಲ್ಲಿಸಿರುವ ದಾಖಲೆಗಳನ್ನು ನೋಡಿ ತಿಳಿದುಕೊಂಡಿರುತ್ತೇನೆ. ನನ್ನ ತಂದೆ ಪಾರ್ಲೆ ಬಿಸ್ಕೆಟ್ ಕಂಪನಿಯಲ್ಲಿ ಮ್ಯಾನೇಜರ್ ಆಗಿದ್ದರು. ನನ್ನ ತಂದೆಗೆ ಸುಮಾರು 20,000/- ಸಂಬಳ ಬರುತ್ತಿತ್ತು. ನನ್ನ ತಂದೆಯ ಭಾಗಕ್ಕೆ ನನ್ನ ತಾತ ಹಕ್ಕು ಖುಲಾಸೆ ಪತ್ರ ಬರೆದುಕೊಟ್ಟಿದ್ದರು ಎಂದರೆ ನಿಜ. ದಾವಾ ಅನುಸೂಚಿತ ಡಿ ಆಸ್ತಿ ಮತ್ತು ಸ.ನಂ. ರ 191/2 ರ ತೋಟ ಬಂದಿತ್ತು ಎಂದರೆ ನಿಜ. ಸದರಿ ಆಸ್ತಿಗಳು ನನ್ನ ತಂದೆಯ ಸ್ವಯಾರ್ಜಿತ ಆಸ್ತಿಗಳು ಎಂದರೆ ನಿಜ. ನಿವೇಶನ ನನ್ನ ತಂದೆ ಭಾಗಕ್ಕೆ ಬಂದ ನಂತರ ಅದನ್ನು ನನ್ನ ತಾಯಿಗೆ ದಾನಪತ್ರ ಮಾಡುವ ಅಧಿಕಾರ ನನ್ನ ತಾತನಿಗೆ ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ಅಜ್ಜಿ ಹನುಮಕ್ಕ ಮೃತಪಟ್ಟಿರುತ್ತಾರೆ ಎಂದರೆ ನಿಜ. ಅವರು ಮೃತ ಪಟ್ಟು ಸುಮಾರು 30 ವರ್ಷಗಳಾಗಿವೆ. ಸ.ನಂ.191/2 ರ ತೋಟದಲ್ಲಿ ನನ್ನ ತಂದೆ ತೆಂಗಿನ ಸಸಿ ನೆಟ್ಟು ನೋಡಿಕೊಳ್ಳುತ್ತಿದ್ದರು ಎಂದರೆ ನಿಜ. ಸದರಿ ತೊಟದಿಂದ ನನ್ನ ತಂದೆಗೆ ಆದಾಯ ಬರುತ್ತಿತ್ತು ಎಂದರೆ ಸರಿಯಲ್ಲ. ನನ್ನ ತಂದೆ 2002 ರಲ್ಲಿ ಮೃತಪಟ್ಟಿರುತ್ತಾರೆ. ನನ್ನ ತಂದೆ ಜೀವಂತ ಇರುವವರೆಗೂ ಒಟ್ಟು ಕುಟುಂಬದಲ್ಲಿ ಇದ್ದೆವು ಎಂದರೆ ನಿಜ. ನನ್ನ ತಾತ ನನ್ನ ತಾಯಿಗೆ ಮಾಡಿರುವ ದಾನಪತ್ರವನ್ನು ನೋಡಿರುತ್ತೇನೆ ಅದರಲ್ಲಿ ಮಕ್ಕಳ ವಿದ್ಯಾಭ್ಯಾಸ ಮತ್ತು ಯೋಗಕ್ಷೇಮಕ್ಕೆ ಎಂದು ಬರೆದುಕೊಟ್ಟಿರುತ್ತಾರೆ ಎಂದರೆ ನಿಜ. ಸ.ನಂ.191/2 ರ ತೋಟವನ್ನು ನಮ್ಮ ತಂದೆ ಬಂದ ಸಂಬಳದಲ್ಲಿ ಅಭಿವೃದ್ಧಿಪಡಿಸಿರುತ್ತಾರೆ ಎಂದರೆ ಸರಿಯಲ್ಲ. ನಿವೇಶನ ನನಗೂ ನನ್ನ

ಸೋದರಿಯಾರಿಗೂ ಸೇರಬೇಕು ಎಂಬ ಉದ್ದೇಶದಿಂದ ನನ್ನ ತಾತ ನನ್ನ ತಾಯಿಗೆ ಮಾಡಿಕೊಟ್ಟಿರುತ್ತಾರೆ ಎಂದರೆ ನಿಜ. 6 ನೇ ಪ್ರತಿವಾದಿಯೊಂದಿಗೆ ಆದ ಕರಾರು ರದ್ದಾಗಿದೆ ಎಂದು ತೋರಿಸಲು ದಾಖಲೆ ಹಾಜರುಪಡಿಸಿರುವುದಿಲ್ಲ.

ಮುಂದುವರೆದ ಪಾಟೀಸವಾಲು ಕೋರಿಕೆ ಮೇರೆಗೆ ಮುಂದೂಡಲಾಯಿತು.

(**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು**).

ಓ.ಹೇ.ಕೆ.ಸರಿ ಇದೆ.

ಸಹಿ/ –

ಹಿರಿಯ ಸಿವಿಲ್ ನ್ಯಾಯಾಧೀಶರು
ಹಾಗೂ ಜೆ.ಎಂ.ಎಫ್.ಸಿ. ನ್ಯಾಯಾಲಯ,
ಚಿಕ್ಕನಾಯಕನಹಳ್ಳಿ.